# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು. - 570 006

ದಿನಾಂಕ : 10-02-2019

### ಬಿ.ಎಡ್. ಪ್ರವೇಶಾತಿ ಸಮಾಲೋಚನೆಗೆ (ಕೌನ್ಸಿಲಿಂಗ್) ಸಂಬಂಧಿಸಿದಂತೆ ಅಭ್ಯರ್ಥಿಗಳಿಗೆ ಸೂಚನೆಗಳು

1) ದಿನಾಂಕ 11.2.2019 ರಂದು ಸಾಮಾನ್ಯಪ್ರವೇಶ ಪರೀಕ್ಷೆಯ ಕೀ (KEY Answers) ಉತ್ತರಗಳನ್ನು ಕರಾಮುವಿ ಅಂತರ್ಜಾಲದಲ್ಲಿ ಪ್ರಕಟಿಸಲಾಗುತ್ತದೆ. ಆಕ್ಷೇಪಣೆಗಳು ಇದ್ದರೆ ಮೂರುದಿನಗಳ ಒಳಗಾಗಿ ಅಂದರೆ 13.2.2019 ರ ಸಂಜೆ 6.00 ಗಂಟೆಯ ಒಳಗಾಗಿ ಮುಕ್ತವಿಶ್ವವಿದ್ಯಾನಿಲಯಕ್ಕೆ ನೇರವಾಗಿ ಅಥವಾ ಈ–ಮೇಲ್ (Email) ಮೂಲಕ ಸಲ್ಲಿಸಬಹುದಾಗಿದೆ. ನಂತರದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ತಮ್ಮ ಆಕ್ಷೇಪಣೆಗಳನ್ನು ಡಾ. ಲಕ್ಷ್ಮೀ, ಮುಖ್ಯಸ್ಥರು, ಶಿಕ್ಷಣ ವಿಭಾಗ, ಕರಾಮುವಿ, ಮೈಸೂರು – 570006, ದೂರವಾಣಿ ಸಂಖ್ಯೆ: 9886917952 ಇವರಿಗೆ ನೇರವಾಗಿ ಅಥವಾ lakshmiksou.edu@gmail.com, ಮತ್ತು laxmi.ksou@ka.gov.in ಈ ಮೇಲ್‌ಗಳ ಮೂಲಕ ಸಲ್ಲಿಸಬಹುದಾಗಿದೆ.

2) ಸಾಮಾನ್ಯ ಪ್ರವೇಶ ಪರೀಕ್ಷೆಯ ಫಲಿತಾಂಶ/ರ್‍ಯಾಂಕ್ ಪಟ್ಟಿಯನ್ನು ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾನಿಲಯದ ಅಂತರ್ಜಾಲ www.ksoumysore.karnataka.gov.in ದಲ್ಲಿ ದಿನಾಂಕ 18.2.2019ರಂದು ಪ್ರಕಟಿಸಲಾಗುವುದು.

3) ಬಿ.ಎಡ್. ಕೋರ್ಸಿನ ಪ್ರವೇಶಾತಿ/ಸಮಾಲೋಚನೆಯು ದಿನಾಂಕ 22.2.2019 ರಿಂದ 28.2.2019 ರವರೆಗೆ ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾನಿಲಯ ಕೇಂದ್ರ ಕಛೇರಿ, ಮುಕ್ತಗಂಗೋತ್ರಿ, ಮೈಸೂರು –570006 ಇಲ್ಲಿನ ಬ್ಯಾಂಕ್ ಕಟ್ಟಡದ ಮೇಲ್ಮಹಡಿಯಲ್ಲಿ ನಡೆಯಲಿದೆ.

4) 22.2.2019 ರಂದು 1:2 ಅನುಪಾತದಲ್ಲಿ ಅಂದರೆ , ಸಾಮಾನ್ಯ ಪ್ರವೇಶಾತಿ ಪರೀಕ್ಷೆಯ 1 ರಿಂದ 494ರವರೆಗಿನ ರ್‍ಯಾಂಕ್/ಮೆರಿಟ್ ಅಭ್ಯರ್ಥಿಗಳು ಸಾಮಾನ್ಯವರ್ಗದ ಸಮಾಲೋಚನೆಗಾಗಿ ಹಾಜರಾಗುವುದು (ಸಾಮಾನ್ಯ ವರ್ಗದ 247 ಅಭ್ಯರ್ಥಿಗಳ ಆಯ್ಕೆಗಾಗಿ ಮಾತ್ರ)

5) ದಿನಾಂಕ 22.2.2019ರಂದು ಮೆರಿಟ್ ಪಡೆದ ಸಾಮಾನ್ಯ ವರ್ಗದ ಅಭ್ಯರ್ಥಿಗಳು ನೋಂದಣಿಯನ್ನು ಬೆಳಿಗ್ಗೆ 9.00 ರಿಂದ 12.00 ಒಳಗೆ ಕಾವೇರಿ ಸಭಾಂಗಣದಲ್ಲಿ ಮಾಡಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ. ನಂತರ ಬಂದ ಅಭ್ಯರ್ಥಿಗಳಿಗೆ ನೋಂದಣಿ ಮಾಡಿಕೊಳ್ಳಲಾಗುವುದಿಲ್ಲ ಮತ್ತು ಪ್ರವೇಶಾತಿ/ಸಮಾಲೋಚನೆಗೆ ಪರಿಗಣಿಸಲಾಗುವುದಿಲ್ಲ.

6) 25.2.2019 ರಂದು ಪರಿಶಿಷ್ಟ ಜಾತಿಯ 74 ಅಭ್ಯರ್ಥಿಗಳ ಮತ್ತು ಪರಿಶಿಷ್ಟ ಪಂಗಡದ 15 ಅಭ್ಯರ್ಥಿಗಳ ಆಯ್ಕೆಗಾಗಿ 1:2 ಅನುಪಾತದಲ್ಲಿ ಅಂದರೆ 148 ಮತ್ತು 30 ಅಭ್ಯರ್ಥಿಗಳು ಸಮಾಲೋಚನೆಗಾಗಿ ಹಾಜರಿರಬೇಕಾಗುತ್ತದೆ (ಈ ಪಟ್ಟಿಯನ್ನು ದಿನಾಂಕ 23.2.2019 ರ ಒಳಗಾಗಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಂತರ್ಜಾಲ ತಾಣವಾದ www.ksoumysore.karnataka.gov.in ದಲ್ಲಿ ಪ್ರಕಟಿಸಲಾಗುವುದು.)

7) ದಿನಾಂಕ 25.2.2019ರಂದು ಮೆರಿಟ್ ಪಡೆದ ಪರಿಶಿಷ್ಟ ಜಾತಿ/ಪಂಗಡದ ಅಭ್ಯರ್ಥಿಗಳು ನೋಂದಣಿಯನ್ನು ಬೆಳಿಗ್ಗೆ 9.00 ರಿಂದ 12.00 ಒಳಗೆ ಕಾವೇರಿ ಸಭಾಂಗಣದಲ್ಲಿ ಮಾಡಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ. ನಂತರ ಬಂದ ಅಭ್ಯರ್ಥಿಗಳಿಗೆ ನೋಂದಣಿ ಮಾಡಿಕೊಳ್ಳಲಾಗುವುದಿಲ್ಲ ಮತ್ತು ಪ್ರವೇಶಾತಿ/ಸಮಾಲೋಚನೆಗೆ ಪರಿಗಣಿಸಲಾಗುವುದಿಲ್ಲ.

8) 27.2.2019 ರಂದು ಪ್ರವರ್ಗ 1 ರ 20 ಅಭ್ಯರ್ಥಿಗಳು, 2ಎ ನ 74 ಅಭ್ಯರ್ಥಿಗಳು, 2ಬಿ ನ 20 ಅಭ್ಯರ್ಥಿಗಳು, 3ಎ ನ 20 ಅಭ್ಯರ್ಥಿಗಳು ಮತ್ತು 3ಬಿ ನ 25 ಅಭ್ಯರ್ಥಿಗಳ ಆಯ್ಕೆಗಾಗಿ 1:2 ಅನುಪಾತದಲ್ಲಿ ಅಂದರೆ 40, 148, 40, 40 ಮತ್ತು 50 ಅಭ್ಯರ್ಥಿಗಳು ಸಮಾಲೋಚನೆಗಾಗಿ ಹಾಜರಾಗಬೇಕು. (ಈ ಪಟ್ಟಿಯನ್ನು ದಿನಾಂಕ 25.2.2019 ರ ಒಳಗಾಗಿ ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾನಿಲಯದ ಅಂರ್ತಜಾಲ www.ksoumysore.karnataka.gov.inದಲ್ಲಿ ಪ್ರಕಟಿಸಲಾಗುವುದು.)

9) ಯಾವುದಾದರೂ ಉಳಿಕೆ ಸೀಟುಗಳಿದ್ದಲ್ಲಿ ಮೆರಿಟ್ ಕಮ್ ರಿಸರ್ವೇಶನ್ ಆಧಾರದಲ್ಲಿ 28.2.2019ರಂದು ಪ್ರವೇಶಾತಿ/ಸಮಾಲೋಚನೆ ನಡೆಸಲಾಗುವುದು. ಉಳಿಕೆ ಸೀಟಿನ ವಿವರಗಳನ್ನು ದಿನಾಂಕ 27.2.2019 ರ ಸಂಜೆ ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾನಿಲಯದ ಅಂರ್ತಜಾಲwww.ksoumysore.karnataka.gov.in ದಲ್ಲಿ ಪ್ರಕಟಿಸಲಾಗುವುದು.

10) ಆಯ್ಕೆಯಾದ ಅಭ್ಯರ್ಥಿಗಳು ಆ ದಿನವೇ ಪೂರ್ಣಶುಲ್ಕವನ್ನು ಪಾವತಿಸಬೇಕಾಗುತ್ತದೆ. ಆದ್ದರಿಂದ ವಿವರಣಾ ಪುಸ್ತಕದಲ್ಲಿರುವಂತೆ ಶುಲ್ಕದ ಹಣದೊಂದಿಗೆ ಸಿದ್ಧವಿರಲು ಸೂಚಿಸಿದೆ.

11) ಆಯ್ಕೆಯಾದ ಅಭ್ಯರ್ಥಿಗಳು ವಿಶ್ವವಿದ್ಯಾನಿಲಯದ ಎಸ್‌ಬಿಐ ಬ್ಯಾಂಕ್ ಶಾಖೆಯಲ್ಲಿ ಶುಲ್ಕವನ್ನು ಆ ದಿನದಂದೇ ಪಾವತಿಸಿ ಚಲನ್ ಅನ್ನು ಪ್ರವೇಶಾತಿ/ಸಮಾಲೋಚನಾ ಕೇಂದ್ರದಲ್ಲಿ ಸಲ್ಲಿಸಿ ಪ್ರವೇಶಾತಿ ಪ್ರಕ್ರಿಯೆ ಪೂರ್ಣಗೊಳಿಸಿಕೊಳ್ಳಲು ಸೂಚಿಸಿದೆ

12) ಶುಲ್ಕ ಪಾವತಿಸಿದ ವಿವರಗಳನ್ನು ಸಲ್ಲಿಸಿದ ನಂತರವೇ ಪ್ರವೇಶಾತಿ ಪ್ರಕ್ರಿಯೆಗಳು ಪೂರ್ಣಗೊಳ್ಳುತ್ತವೆ.

13) ಜ್ಯೇಷ್ಠತಾ ಪಟ್ಟಿಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ದಿನಾಂಕ 20.2.2019 ರ ಸಂಜೆ 6.00 ಗಂಟೆಯ ಒಳಗಾಗಿ ನಿರ್ದೇಶಕರು (ಪ್ರವೇಶಾತಿ) ಇವರಿಗೆ ಈಮೇಲ್ admksou@gmail.com ಗೆ ಸಲ್ಲಿಸಲು ಸೂಚಿಸಿದೆ. ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

14) ಅಭ್ಯರ್ಥಿಗಳಿಗೆ ಯಾವುದೇ ರೀತಿಯ ಸಂದೇಶಗಳನ್ನು/ಸೂಚನೆಗಳನ್ನು ಪತ್ರವ್ಯವಹಾರ/ಎಸ್.ಎಮ್.ಎಸ್/ ಅಥವಾ ಈಮೇಲ್ ಮೂಲಕ ಮಾಡಲಾಗುವುದಿಲ್ಲ. ಆದ್ದರಿಂದ ಆಯ್ಕೆ/ಸಮಾಲೋಚನೆಗೆ ಸಂಬಂಧಿಸಿದಂತೆ ಕೇವಲ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಂತರ್ಜಾಲತಾಣ www.ksoumysore.karnataka.gov.in ದಲ್ಲಿ ಮಾತ್ರ ನೋಡಲು ಸೂಚಿಸಿದೆ.

15) ಅಭ್ಯರ್ಥಿಗಳು ತಮ್ಮ ಆನ್‌ಲೈನ್ ಅರ್ಜಿಯ ಎರಡು ಪ್ರಿಂಟ್ ಪ್ರತಿಗಳು, ಪ್ರವೇಶಾತಿಗೆ ಅಗತ್ಯವಿರುವ ಎಲ್ಲ ಮೂಲ ಪ್ರಮಾಣಪತ್ರಗಳನ್ನು (ಅಂಕಪಟ್ಟಿ, ಜಾತಿ/ಆದಾಯ ಪ್ರಮಾಣಪತ್ರ, ಇತರೆ ದಾಖಲಾತಿಗಳ ಮೂಲ ಪ್ರಮಾಣಪತ್ರಗಳು (Original Documents) ಒಂದು ಜೆರಾಕ್ಸ್ ಪ್ರತಿಯ ಜೊತೆ ತರಲು ಸೂಚಿಸಿದೆ.

**ಕುಲಸಚಿವರು**

ಕರಾಮುವಿ, ಮೈಸೂರು